# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **481**
ಮಾನ್ಯ ವಿಧಾನಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕೇಶವಪ್ರಸಾದ್ .ಎಸ್. (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 10-03-2025
ಉತ್ತರಿಸುವವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಪ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರ್ಹತೆ ಇಲ್ಲದಿದ್ದರೂ ವೈದ್ಯರೆಂದು ಬಿಂಬಿಸಿಕೊಂಡು ಜನರನ್ನು ವಂಚಿಸುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಮರುಕಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಲ್ಲಿಯವರೆಗೂ ವರದಿಯಾದ ಪ್ರಕರಣಗಳೆಷ್ಟು; ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಗಮನಕ್ಕೆ ಬಂದಿದೆ.<br><br>2023-2024 ನೇ ಸಾಲಿಗೆ ರಾಜ್ಯದಲ್ಲಿ 623 ನಕಲಿ ವೈದ್ಯರು ಪತ್ತೆಯಾಗಿದ್ದು, 163ಕ್ಲಿನಿಕ್‌ಗಳಿಗೆ ನೋಟಿಸ್ ನೀಡಲಾಗಿದೆ, 193 ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ, 142 ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಗಿದೆ, 89 ನಕಲಿ ವೈದ್ಯರಿಗೆ ದಂಡ ವಿಧಿಸಲಾಗಿದೆ ಮತ್ತು 36 ಪ್ರಕರಣಗಳು ನ್ಯಾಯಾಲಯದ ವಿಚಾರಣೆ ಹಂತದಲ್ಲಿವೆ. ಮಾಹಿತಿಯನ್ನು **ಅನುಬಂಧ** 1 ರಲ್ಲಿ ನೀಡಲಾಗಿದೆ.<br><br>**ಆಯುಷ್ ಇಲಾಖೆ:**<br>ಈವರೆಗೂ 833 ಪ್ರಕರಣಗಳು ವರದಿಯಾಗಿವೆ, ಈ ಪ್ರಕರಣಗಳ ಬಗ್ಗೆ ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸಾ, ಸಿದ್ಧ, ಯುನಾನಿ ಮತ್ತು ಯೋಗ ಪರಿಕರ್ಮಿಗಳ ನೋಂದಾವಣೆ ಮತ್ತು ವೈದ್ಯಕೀಯ ಪರಿಕರ್ಮಿಗಳ ವಿವಿಧ ಪ್ರಬಂಧಕಗಳ ತಿದ್ದುಪಡಿ ಕಾಯ್ದೆ 2017ರ ಉಪ ಕಾಯಿದೆ 36ರನ್ವಯ ನಿಯಮಾನುಸಾರ ಕ್ರಮವಹಿಸಿರುವ ಬಗ್ಗೆ ಮಾಹಿತಿಯನ್ನು **ಅನುಬಂಧ -2**ರಲ್ಲಿ ನೀಡಲಾಗಿದೆ. |
| ಆ) | ನಕಲಿ ವೈದ್ಯರ ಹಾವಳಿಯನ್ನು ತಡೆಗಟ್ಟಲು ಸರ್ಕಾರವು ರೂಪಿಸಿರುವ ಕಟ್ಟು ನಿಟ್ಟಿನ ಕಾನೂನುಗಳೇನು; ನಕಲಿ ವೈದ್ಯರಿಗೆ ನೀಡುವ ಶಿಕ್ಷೆಯ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ನಕಲಿವೈದ್ಯರ / ಕ್ಲಿನಿಕ್‌ಗಳ ಹಾವಳಿ ತಡೆಯಲು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ 2007, ಕಲಂ 4ರ ಅಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ಅಧ್ಯಕ್ಷರಾಗಿ ಜಿಲ್ಲಾಧಿಕಾರಿಗಳು, ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಸಮಿತಿಯ ಇತರೆ ಸದಸ್ಯರಾದ ಜಿಲ್ಲಾ ಆಯುಷ್ ಅಧಿಕಾರಿ, ಭಾರತೀಯ ವೈದ್ಯಕೀಯ ಸಂಘದಿಂದ ಓರ್ವ ಸದಸ್ಯರು ಮತ್ತು ಓರ್ವ ಮಹಿಳಾ ಪ್ರತಿನಿಧಿಯನ್ನು ಒಳಗೊಂಡ ಸಮಿತಿಯು ಇರುತ್ತದೆ.<br>ಕೆ.ಪಿ.ಎಂ.ಇ. ಅಧಿನಿಯಮ, 2007ರ ಸೆಕ್ಷನ್ 21ರ ಅನ್ವಯ, ಸರ್ಕಾರಿ ಆದೇಶ ಸಂಖ್ಯೆ: ಆಕುಕ11 ಎಫ್‌ಪಿಎಆರ್ 2018, ದಿನಾಂಕ: 30-06-2020 ರಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳನ್ನು ಪ್ರಾಧಿಕೃತ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.<br>ಸದರಿ ಪ್ರಾಧಿಕೃತ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಭೇಟಿ ನೀಡಿ, ನಿಯಮ ಉಲ್ಲಂಘಿಸಿದವರ ವಿರುದ್ಧ ಕೆ.ಪಿ.ಎಂ.ಇ.ಕಾಯ್ದೆಯಡಿ ಕ್ರಮ ಕೈಗೊಂಡು, ಜಿಲ್ಲಾ ಸಮಿತಿಯಾದ ಕೆ.ಪಿ.ಎಂ.ಇ. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ.<br>ಸದರಿ ವರದಿಯನ್ನು ಆದರಿಸಿ ,ಜಿಲ್ಲಾ ಸಮಿತಿಯು ನಿಯಮ ಉಲ್ಲಂಘಿಸಿದ ನಕಲಿ ವೈದ್ಯರ / ಕ್ಲಿನಿಕ್‌ಗಳ ವಿಚಾರಣೆ ನಡೆಸಿ, ಸದರಿಯವರು ತಪ್ಪಿತಸ್ಥರೆಂದು ಸಾಬೀತಾದಲ್ಲಿ ಅಂತವರ ವಿರುದ್ಧ ಜಿಲ್ಲಾ ಪ್ರಾಧಿಕಾರವು ಕೆ.ಪಿ.ಎಂ.ಇ. ಅಧಿನಿಯಮ, 2007 ರ ಸೆಕ್ಷನ್ 19(1) ಹಾಗೂ ಸೆಕ್ಷನ್ 22 ರಂತೆ ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| | | **ಆಯುಷ್ ಇಲಾಖೆ:**<br>ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿಯನ್ನು ತಡೆಗಟ್ಟಲು ಸರ್ಕಾರವು, ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 325 ಪಿಐಎಂ 2017. ದಿನಾಂಕ: 29-08-2017ರಲ್ಲಿ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ರಚಿಸಿದೆ.<br>ಸದರಿ ಪ್ರಕರಣಗಳ ಬಗ್ಗೆ ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸಾ, ಸಿದ್ಧ, ಯುನಾನಿ ಮತ್ತು ಯೋಗ ಪರಿಕರ್ಮಿಗಳ ನೊಂದಾವಣೆ ಮತ್ತು ವೈದ್ಯಕೀಯ ಪರಿಕರ್ಮಿಗಳ ವಿವಿಧ ಪ್ರಬಂಧಕಗಳ ತಿದ್ದುಪಡಿ ಕಾಯ್ದೆ, 2017ರ ಉಪ ಕಾಯಿದೆ 36ರನ್ವಯ ಮೊದಲ ಬಾರಿಗೆ ರೂ.25,000/-ಗಳವರೆಗೆ ದಂಡ ಮತ್ತು ಜೈಲು ಶಿಕ್ಷೆ ಹಾಗೂ ಎರಡನೇ ಬಾರಿಗೆ ರೂ.2,50,000/-ಗಳವರೆಗೆ ದಂಡ ಮತ್ತು ಒಂದು ವರ್ಷ ಜೈಲು ಶಿಕ್ಷೆ ಮತ್ತು ಪದೇ ಪದೇ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವುದು ಕಂಡು ಬಂದಲ್ಲಿ ಅಂಥವರಿಗೆ ರೂ.5,00,000/-ಗಳವರೆಗೆ ದಂಡ ಹಾಗೂ ಮೂರು (03) ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಗುವುದು. |
| ಇ) | ಹಳ್ಳಿಗಳಲ್ಲಿ ಆರ್ಎಂಪಿ ವೈದ್ಯರು ಅಲೋಪಥಿ, ನ್ಯಾಚುರೋಪಥಿ, ಆಯುರ್ವೇದ ಹಾಗೂ ಹೋಮಿಯೋಪಥಿ ಹೆಸರಿನಲ್ಲಿ ದಂಧೆ ನಡೆಸಿ ರೋಗಿಗಳ ಜೀವದ ಜೊತೆ ಚೆಲ್ಲಾಟವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು. | ಗಮನಕ್ಕೆ ಬಂದಿದೆ.<br>ಆರ್.ಎಂ.ಪಿ. ವೈದ್ಯರ ವಿರುದ್ಧ ಕೆ.ಪಿ.ಎಂ.ಇ. ಅಧಿನಿಯಮ, 2007ರ ಸೆಕ್ಷನ್ 19(1) ಹಾಗೂ ಸೆಕ್ಷನ್ 22 ರಂತೆ ಕ್ರಮವಹಿಸಲಾಗುವುದು ಹಾಗೂ ನಕಲಿ ವೈದ್ಯರ ಹಾವಳಿಯನ್ನು ತಡೆಗಟ್ಟಲು ಐ.ಇ.ಸಿ.ಯಲ್ಲಿ ಜಾಹಿರಾತು ಪ್ರಕಟಿಸಲಾಗಿದೆ ಮತ್ತು ರೇಡಿಯೋಜಿಂಗಲ್ಸ್ ಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಕ್ರಮವಹಿಸಲಾಗುತ್ತಿದೆ.<br>**ಆಯುಷ್ ಇಲಾಖೆ:**<br>ನಕಲಿ ವೈದ್ಯರ ಹಾವಳಿ ತಡೆಗಟ್ಟಲು ಸರ್ಕಾರವು ಜಿಲ್ಲಾ ಆಡಳಿತದ ಮೂಲಕ ನಕಲಿ ವೈದ್ಯರ ಬಗ್ಗೆ ಜನ ಜಾಗೃತಿ ಮೂಡಿಸಲು ಪತ್ರಿಕಾ ಪ್ರಕಟಣೆಯನ್ನು ಒಳಗೊಂಡಂತೆ ಬಿತ್ತಿ ಪತ್ರಿಕೆಗಳ ಮೂಲಕ ಕ್ರಮವಹಿಸಲಾಗುತ್ತಿದೆ. |
| ಈ) | ಕೆಎಯುಪಿಯಲ್ಲಿ ಒಮ್ಮೆ ನೋಂದಣಿಯಾದ ವೈದ್ಯರು ನಿಧನರಾದರೆ, ಹೊರ ರಾಜ್ಯಕ್ಕೆ ಅಥವಾ ವಿದೇಶಗಳಿಗೆ ತೆರಳಿದರೆ ಅವರ ನೋಂದಣಿ ರದ್ದಾಗುತ್ತದೆಯೇ; ಇವರ ನೋಂದಣಿ ಸಂಖ್ಯೆಗಳನ್ನು ಬಳಸಿ ನಕಲಿ ವೈದ್ಯರಿಗೆ ಪ್ರಮಾಣ ಪತ್ರಗಳನ್ನು ನೀಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ; ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು; ಈ ತರನಾದ ಅಕ್ರಮಗಳನ್ನು ತಡೆಗಟ್ಟಲು ರೂಪಿಸಿರುವ ಕಾನೂನು ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | • ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯಲ್ಲಿ ಒಮ್ಮೆ ನೊಂದಣಿಗೊಂಡರೆ ನೊಂದಣಿ ಸಂಖ್ಯೆ ಜೀವಿತಾವಧಿಯವರೆಗೂ ಅದೇ ಸಂಖ್ಯೆ ಇರುತ್ತದೆ, ಮಂಡಳಿಯಲ್ಲಿ ನೊಂದಣಿಗೊಂಡ ವೈದ್ಯರು ನಿಧನಗೊಂಡರೆ ಮರಣ ಪ್ರಮಾಣ ಪತ್ರದ ದಾಖಲಾತಿಯೊಂದಿಗೆ ರದ್ದುಗೊಳಿಸಲಾಗುತ್ತದೆ, ಹೊರ ರಾಜ್ಯಕ್ಕೆ ಅಥವ ವಿದೇಶಕ್ಕೆ ತೆರಳಿದರೆ ಮತ್ತೆ ಬಂದು ನೋಂದಣಿಗೊಳ್ಳಲು ಇಚ್ಛಿಸಿದ್ದಲ್ಲಿ ಅದೇ ನೋಂದಣಿ ಸಂಖ್ಯೆ ನೀಡಲು ಕೆ.ಎ.ಯು.ಪಿ. ಕಾಯಿದೆಯಲ್ಲಿ ಅವಕಾಶ ಕಲ್ಪಿಸಿದೆ.<br>• ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ, ಬೆಂಗಳೂರು, ಇಲ್ಲಿ ಚುನಾಯಿತ ಮಂಡಳಿಯು ಅಸ್ತಿತ್ವದಲ್ಲಿ ಇದ್ದ ಸಂದರ್ಭದಲ್ಲಿ 2013ನೇ ಸಾಲಿನಿಂದ ಎಲ್ಲಾ ನೊಂದಣಿ ಪ್ರಕ್ರಿಯೆಗಳನ್ನು ಆನ್ ಲೈನ್ ಮುಖಾಂತರ ಬೈಯೋ ಮೆಟ್ರಿಕ್ ನೊಂದಣಿಗಳನ್ನು ಜಾರಿಗೆ ತರಲಾಗಿರುತ್ತದೆ, ಬೈಯೋಮೆಟ್ರಿಕ್ ನೊಂದಣಿಗಾಗಿ ಬರುವ ವೈದ್ಯರುಗಳು ತಮ್ಮ ಎಲ್ಲಾ ಮೂಲ ದಾಖಾಲಾತಿಗಳೊಂದಿಗೆ ಶುಲ್ಕ ಪಾವತಿಸಿರುವ |

| | | |
|---|---|---|
| | | ಬ್ಯಾಂಕ್ ಚಲನ್‌ನ್ನು ಸಹ http://kaupboard.karnataka.gov.in ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಿಕೊಂಡು ಬಂದ ನಂತರ ನಿಯಮಾನುಸಾರ ಪರಿಶೀಲಿಸಿ ನೊಂದಣಿಗೆ ಅವಕಾಶ ಕಲ್ಪಿಸಲಾಗುವುದು, ನೊಂದಣಿಯಾದ ಪ್ರಮಾಣ ಪತ್ರಗಳಲ್ಲಿ QR ಕೋಡ್ ಮುದ್ರಿತಾವಾಗುವುದರಿಂದ ಒಂದು ಬಾರಿ ನೊಂದಣಿ ಸಂಖ್ಯೆ ನೀಡಿದ ನಂತರ ಆ ಸಂಖ್ಯೆಯನ್ನು ಬೇರೆ ವೈದ್ಯರಿಗೆ ನೀಡಲು ಸಾದ್ಯವಾಗುವುದಿಲ್ಲ ಹಾಗೂ ಈ ಮಂಡಳಿಯ ವೆಬ್‌ಸೈಟ್‌ನಲ್ಲಿ ನೊಂದಣಿಗೊಂಡಿರುವ ವೈದ್ಯರುಗಳ ದಾಖಲಾತಿಗಳನ್ನು ಸಾರ್ವಜನಿಕರು ವೀಕ್ಷಿಸಲು ಅವಕಾಶವಿರುತ್ತದೆ.<br><br>• ಸರ್ಕಾರದ ಅದಿಸೂಚನೆ ಸಂಖ್ಯೆ: ಆಕುಕ 124 ಪಿಐಎಂ 2019, ದಿನಾಂಕ: 19-08-2021ರಲ್ಲಿ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ, ಬೆಂಗಳೂರು, ಇಲ್ಲಿ ಬಯೋಮೆಟ್ರಿಕ್ ನೊಂದಣಿಯು ಜಾರಿಗೆ ಬರುವ ಪೂರ್ವದಲ್ಲಿ ಮ್ಯಾನ್ಯೂಲ್ ನೊಂದಣಿಯಾಗಿರುವ ವೈದ್ಯರುಗಳ ನೈಜತೆಯ ಬಗ್ಗೆ ಪರಿಶೀಲಿಸಲು ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ, ತಾಂತ್ರಿಕ ಸಮಿತಿಯವರು ನೈಜತೆಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿ ತಾಳೆಯಾಗದ ನೊಂದಣಿಗಳ ಬಗ್ಗೆ ಕ್ರಮ ಕೈಗೊಳ್ಳುತ್ತಿರುವ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>• ಮುಂದುವರೆದು, 2013 ರಲ್ಲಿ ಬಯೋಮೆಟ್ರಿಕ್ ನೋಂದಣಿ ಜಾರಿಗೆ ಬರುವ ಮೊದಲು ಮಂಡಳಿಯಲ್ಲಿ ನೋಂದಣಿ ಹೊಂದಿದ ವೈದ್ಯರುಗಳ ಪ್ರಮಾಣ ಪತ್ರಗಳು ನೈಜವಾಗಿರುವುದನ್ನು ಖಚಿತಪಡಿಸಿಕೊಳ್ಳಲು Refresh registration ಎಂಬ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಇದರಲ್ಲಿ 2013ಕ್ಕಿಂತ ಹಿಂದೆ ನೋಂದಣಿಯಾದ ವೈದ್ಯರುಗಳು ಅಗತ್ಯ ದಾಖಲಾತಿಗಳನ್ನು ವೆಬ್‌ಸೈಟ್ ನಲ್ಲಿ ಅಪ್ಲೋಡ್ ಮಾಡಿ ನೋಂದಣಿಯನ್ನು Refresh ಮಾಡಲು ಸೂಚಿಸಲಾಗಿದೆ. |

ಸಂಖ್ಯೆ: ಆಕುಕ 7 ಎಸ್ ಟಿಕ್ಯೂ 2025

**( ದಿನೇಶ್ ಗುಂಡೂರಾವ್ )**
**ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣ ಸಚಿವರು.**

ಅನುಬಂಧ - 1

| FAKE DOCTORS DETAILS FROM SEP-2023 TO SEP-2024 | | | | | | | |
|---|---|---|---|---|---|---|---|
| Sl. No | District | Fake Doctor count District wise | Notice issued | Closed | Seized | Penalty | Any legal cases filed against fake doctor in judicial court |
| 1 | Bagalkote | 36 | 0 | 22 | 13 | 0 | 1 |
| 2 | Ballari | 9 | 0 | 0 | 1 | 8 | 0 |
| 3 | Belagavi | 3 | 0 | 0 | 0 | 3 | 0 |
| 4 | Bengaluru Rural | 0 | 0 | 0 | 0 | 0 | 0 |
| 5 | Bengaluru urban | 15 | 10 | 3 | 2 | 0 | 0 |
| 6 | Bidar | 9 | 0 | 0 | 0 | 8 | 1 |
| 7 | Chamarajanagara | 20 | 0 | 11 | 9 | 0 | 0 |
| 8 | Chikkaballapura | 0 | 0 | 0 | 0 | 0 | 0 |
| 9 | Chikkamagaluru | 2 | 0 | 2 | 0 | 0 | 0 |
| 10 | Chitradurga | 1 | 0 | 1 | 0 | 0 | 0 |
| 11 | Dakshina Kannada | 17 | 9 | 8 | 0 | 0 | 0 |
| 12 | Davanagere | 2 | 0 | 0 | 0 | 2 | 0 |
| 13 | Dharwad | 5 | 0 | 5 | 0 | 0 | 0 |
| 14 | Gadag | 3 | 0 | 0 | 3 | 0 | 0 |
| 15 | Hassan | 0 | 0 | 0 | 0 | 0 | 0 |
| 16 | Haveri | 12 | 6 | 5 | 0 | 0 | 1 |
| 17 | Kalaburagi | 64 | 0 | 0 | 0 | 64 | 0 |
| 18 | Kodagu | 0 | 0 | 0 | 0 | 0 | 0 |
| 19 | Kolar | 115 | 0 | 0 | 106 | 0 | 9 |
| 20 | Koppal | 33 | 0 | 33 | 0 | 0 | 0 |
| 21 | Mandya | 0 | 0 | 0 | 0 | 0 | 0 |
| 22 | Mysuru | 2 | 0 | 0 | 0 | 0 | 2 |
| 23 | Raichur | 49 | 28 | 10 | 5 | 0 | 6 |
| 24 | Ramanagara | 1 | 0 | 0 | 1 | 0 | 0 |
| 25 | Shivamogga | 14 | 0 | 13 | 0 | 0 | 1 |
| 26 | Tumakuru | 84 | 48 | 36 | 0 | 0 | 0 |
| 27 | Udupi | 3 | 0 | 0 | 2 | 1 | 0 |
| 28 | Uttara Kannada | 2 | 1 | 1 | 0 | 0 | 0 |
| 29 | Vijayanagara | 81 | 56 | 18 | 0 | 3 | 4 |
| 30 | Vijayapura | 30 | 4 | 25 | 0 | 0 | 1 |
| 31 | Yadagiri | 11 | 1 | 0 | 0 | 0 | 10 |
| Total | | 623 | 163 | 193 | 142 | 89 | 36 |

Abanis

ಅನುಬಂಧ - 2

<u>**ಅನುಬಂಧ**</u>

| ಕ್ರಮ ಸಂಖ್ಯೆ | ಜಿಲ್ಲಾವಾರು | ಕಳೆದ ಎರಡು ವರ್ಷಗಳಲ್ಲಿ ಪತ್ತೆ ಹಚ್ಚಿರುವ ಸಂಖ್ಯೆ | ಷರಾ |
|---|---|---|---|
| 1 | ತುಮಕೂರು | 10 | ಪ್ರಕರಣ ದಾಖಲಾಗಿದ್ದು ಅಂತಿಮ ನೋಟೀಸ್ ಜಾರಿ ಮಾಡಲಾಗಿದೆ. |
| 2 | ಕಲಬುರಗಿ | 111 | 66 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ |
| 3 | ಧಾರವಾಡ | 71 | ಕ್ಲಿನಿಕ್‌ಗಳನ್ನು ಮುಚ್ಚಿಸಿ ಅನಧೀಕೃತ ವೈದ್ಯ ವೃತ್ತಿ ಮಾಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. |
| 4 | ಮೈಸೂರು | 56 | 12 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ. |
| 5 | ಕೊಪ್ಪಳ | 00 | ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| 6 | ಕೋಲಾರ | 125 | 125 ನಕಲಿ ಕ್ಲಿನಿಕ್‌ಗಳನ್ನು ಕೆಪಿಎಂಇ ನಿಯಮ 22 ರಂತೆ ಸೀಜ್ ಮಾಡಿ ನಿಯಮ 19 ರಂತೆ ಪ್ರಕರಣ ದಾಖಲಿಸಲು ಆದೇಶಿಸಿದೆ, ಮುಂದುವರೆದು ಇಲ್ಲಿಯವರೆಗೂ 54 ನಕಲಿ ಕ್ಲಿನಿಕ್ ಸ್ವಯಂಪ್ರೇರಿತರಾಗಿ ಮುಚ್ಚಿರುತ್ತಾರೆ ಹಾಗೂ 38 ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಗಿದ್ದು ನ್ಯಾಯಾಲಯದಲ್ಲಿ 13 ಪಿ.ಸಿ.ಆರ್, ಪೋಲಿಸ್ ಠಾಣೆಯಲ್ಲಿ 2 ಎಫ್.ಐ.ಆರ್ ದಾಖಲಾಗಿದೆ. |
| 7 | ಹಾವೇರಿ | 19 | ಕೆಪಿಎಂಇ ಅಧಿನಿಯಮದಡಿ 19 ಪ್ರಕರಣ FIR ದಾಖಲಿಸಲಾಗಿದೆ. |
| 8 | ದಾವಣಗೆರೆ | 24 | 24 ನಕಲಿ ವೈದ್ಯರ ಪ್ರಕರಣಗಳು ದಾಖಲಾಗಿದ್ದು ಕ್ಲಿನಿಕ್ ತೆರೆಯದಂತೆ ಮುಚ್ಚಿಸಲಾಗಿದೆ. |
| 9 | ಹಾಸನ | 20 | 09 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ. |
| 10 | ಮಂಡ್ಯ | 01 | - |
| 11 | ಯಾದಗಿರಿ | 28 | ಕೆಪಿಎಂಇ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಂಡು ಕ್ಲಿನಿಕ್ ಮುಚ್ಚಿಸಲಾಗಿದೆ. |
| 12 | ವಿಜಾಪುರ | 30 | ತಾಲ್ಲೂಕು ಆರೋಗ್ಯ ಅಧಿಕಾರಿಗಳಿಂದ ನೋಟೀಸ್ ನೀಡಲಾಗಿದೆ. |
| 13 | ಬೆಂಗಳೂರು ಗ್ರಾಮಾಂತರ | 09 | 05 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ. |
| 14 | ಚಿಕ್ಕಬಳ್ಳಾಪುರ | 02 | 02 ಕ್ಲಿನಿಕ್‌ಗಳನ್ನು ಮುಚ್ಚಿಸಲು ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| 15 | ಗದಗ | 16 | 15 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ |
| 16 | ಬಾಗಲಕೋಟೆ | - | ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| 17 | ರಾಯಚೂರು | 46 | ಕೆಪಿಎಂಇ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಂಡು ಕ್ಲಿನಿಕ್ ಮುಚ್ಚಿಸಲಾಗಿದೆ. |
| 18 | ಚಿತ್ರದುರ್ಗ | 01 | ಖಾಸಗಿ ವೈದ್ಯಕೀಯ ಅಧಿನಿಯಮ ಕಾಯ್ದೆ 2007 ಹಾಗೂ 2009ರನ್ವಯ ನೋಟೀಸ್ ನೀಡಿ ಕ್ಲಿನಿಕ್‌ನ್ನು ಮುಚ್ಚಿಸಲಾಗಿದೆ. |
| 19 | ಬೆಂಗಳೂರು ನಗರ | 66 | 66 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ. |

| | | | |
|---|---|---|---|
| 20 | ಶಿವಮೊಗ್ಗ | 91 | 19 ಜನರ ವಿರುದ್ಧ ಜಿಲ್ಲೆಯ ವಿವಿಧ ಪೋಲಿಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ, ಮುಂದುವರೆದು.<br>72 ಪ್ರಕರಣಗಳಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಬೀಗಮುದ್ರೆ ಕೈಗೊಳ್ಳಲಾಗಿರುತ್ತದೆ. |
| 21 | ಚಿಕ್ಕಮಗಳೂರು | 02 | ಖಾಸಗಿ ಕ್ಲಿನಿಕ್‌ಗಳಿಗೆ ನೋಟೀಸ್ ನೀಡಿ ಕ್ಲಿನಿಕ್ ಮುಚ್ಚಿಸಲಾಗಿದೆ. |
| 22 | ಬಳ್ಳಾರಿ/ವಿಜಯನಗರ | 18 | FIR ದಾಖಲಿಸಲಾಗಿದೆ. |
| 23 | ಕೊಡಗು | 15 | 15 ನಕಲಿ ವೈದ್ಯರ ವಿರುದ್ಧ FIR ದಾಖಲಾಗಿದೆ. |
| 24 | ಬೀದರ್ | - | ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| 25 | ರಾಮನಗರ | 00 | ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| 26 | ಉಡುಪಿ | 05 | 04 ಪ್ರಕರಣಗಳನ್ನು ನಿಯಾನುಸಾರ ಕ್ರಮ ಜರುಗಿಸಿ ಇತ್ಯರ್ಥಗೊಳಿಸಲಾಗಿರುತ್ತದೆ. 01 ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. |
| 27 | ಚಾಮರಾಜನಗರ | 0 | ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| 28 | ದಕ್ಷಿಣ ಕನ್ನಡ | 20 | FIR ದಾಖಲಿಸಲಾಗಿದೆ. |
| 29 | ಬೆಳಗಾವಿ | 16 | ಕೆಪಿಎಂಇ ನೊಂದಣಿ ಪ್ರಾಧಿಕಾರದ .ಮುಖಾಂತರ ಕ್ರಮ ಜರುಗಿಸಲಾಗಿದೆ. |
| 30 | ಕಾರವಾರ | 31 | - |
| ಒಟ್ಟು | | 833 | |

REGISTRAR
K.A.U.P. BOARD
Brigade Plaza, Anandh Rao Circle
Gandhinagar, Bengaluru-560009